<u>ದಿಃ06.10.2023 OS No.1/2017 PW-1</u>

ದಿಃ06.10.2023 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ. ಟಿ.ಎನ್.ಆರ್. ವಕೀಲರಿಂದ</u>

ನಾನು 2ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆಯನ್ನು ಸಲ್ಲಿಸಲು ದಾಖಲೆಯನ್ನು ನನ್ನ ಸೋದರ ಮಾವನಿಂದ ತೆಗೆಸಿರುತ್ತೇನೆ. ಈ ದಾವೆ ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಈ ದಾವೆಯಲ್ಲಿ ಒಟ್ಟು 18 ಸ್ವತ್ತುಗಳನ್ನು ಸೇರ್ಪಡೆ ಮಾಡಿರುತ್ತೇನೆ. ಸದರಿ ಸ್ವತ್ತುಗಳಿಗೆ ಸಂಬಂಧವಾಗಿ ನನಗೆ ಚೆಕ್ಕುಬಂದಿ ಗೊತ್ತಿರುವುದಿಲ್ಲ. ದಾವಾ ಸ್ವತ್ತುಗಳು ಮಾತ್ರ ನಮ್ಮ ಕುಟುಂಬಕ್ಕೆ ಸೇರಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ತಂದೆಯು ಒಂದು ಚಿಕ್ಕಮನೆಯಲ್ಲಿ ವಾಸವಿರುತ್ತಾರೆ. ಸದರಿ ವಾಸದ ಮನೆಯನ್ನು ಈ ದಾವೆಗೆ ಸೇರ್ಪಡೆ ಮಾಡಲಾಗಿದೆಯೋ ಎಂಬ ಬಗ್ಗೆ ನನಗೆ ಅರಿವು ಇರುವುದಿಲ್ಲ. ಸದರಿ ವಾಸದ ಮನೆಯ ನಂಬರ್ ನನಗೆ ಗೊತ್ತಿರುವುದಿಲ್ಲ. ಸದರಿ ವಾಸದ ಮನೆಯು ಚಿಕ್ಕ ಹೆಂಚಿನ ಮನೆಯಾಗಿರುತ್ತದೆ. ಅದರ ಅಳತೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ವಿದ್ಯಾಭ್ಯಾಸ ಮಾಡದೇ ಇರುವ ಕಾರಣ ದಾವಾ ಸ್ವತ್ತುಗಳ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳ ಸ್ವರೂಪದ ಬಗ್ಗೆ ನನಗೆ ಗೊತ್ತಿರುತ್ತದೆ.

ಲಲಿತಮ್ಮ ಎಂದರೆ ನನ್ನ ತಾಯಿ. ಅವರು ನ್ಯಾಯಾಲಯಕ್ಕೆ ಬಂದಿರುತ್ತಾರೆ. ನನ್ನ ತಾಯಿಯು ಪ್ರತಿ ದಿನಾಂಕಗಳಂದು ನ್ಯಾಯಾಲಯಕ್ಕೆ ನನ್ನ ಜೊತೆ ಬರುತ್ತಾರೆ ಎಂದರೆ ಸರಿ. ನನ್ನ ಜನ್ಮದಿನಾಂಕ ನನಗೆ

ಗೊತ್ತಿರುವುದಿಲ್ಲ. ನಾನು ಹುಲುವಾಡಿ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದರೆ ಸರಿ. ಸದರಿ ಶಾಲೆಯು ನಮ್ಮ ಮನೆಯ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಪ್ರಾಥಮಿಕ ಶಾಲೆಯಿಂದ ನನ್ನ ಜನ್ಮ ದಿನಾಂಕದ ದಾಖಲೆಯನ್ನು ಪಡೆದು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸದರಿ ದಾಖಲೆಯನ್ನು ಮುಂದಿನ ದಿನಾಂಕದಂದು ನನಗೆ ಸಿಕ್ಕಿದರೆ ಹಾಜರುಪಡಿಸಲು ತಯಾರಿರುತ್ತೇನೆ.

ಅಭಿಷೇಕ್ ಮತ್ತು ಹರ್ಷನ್ ಎಂದರೆ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಸದರಿಯವರು ನನ್ನ ತಂದೆಯ 2ನೇ ಹೆಂಡತಿ ಮಕ್ಕಳು ಎಂದರೆ ನನಗೆ ಗೊತ್ತಿರುವುದಿಲ್ಲ. 2ನೇ ಪ್ರತಿವಾದಿ ನನ್ನ ತಮ್ಮ ಎಂದರೆ ಸರಿ. 2ನೇ ಪ್ರತಿವಾದಿಗೆ ಇಬ್ಬರು ಪತ್ನಿಯರು ಎಂದರೆ ನನಗೆ ಗೊತ್ತಿರುವುದಿಲ್ಲ. 2ನೇ ಪ್ರತಿವಾದಿಯ ಮಗನ ಹೆಸರು ದಿಶಂತ್ ಗೌಡ ಎಂದರೆ ನನಗೆ ಗೊತ್ತಿರುವುದಿಲ್ಲ. 2ನೇ ಪ್ರತಿವಾದಿಗೆ ವಿವಾಹವಾಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಿಶಂತ್ ಗೌಡ ನನ್ನ ತಮ್ಮನ ಮೊದಲನೇ ಹೆಂಡತಿ ಮಗ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಿಶಂತ್ ಗೌಡ ತನ್ನ ತಾಯಿಯ ಮೂಲಕ ಅವರನ್ನು ಸಂರಕ್ಷಕರನ್ನಾಗಿ ಮಾಡಿ ಅಪರ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 186/2015 ರಂತೆ ಭಾಗಾಂಶಕ್ಕಾಗಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ನನ್ನನ್ನು 3ನೇ ಪ್ರತಿವಾದಿಯಾಗಿ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ನನ್ನನ್ನು ಮತ್ತು ನನ್ನ ತಾಯಿಯನ್ನು ಏಕಪಕ್ಷೀಯ ಮಾಡಿರತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನನ್ನ ತಂದೆ ವಾಸ ಮಾಡುತ್ತಿದ್ದರು ಎಂದು ಹೇಳುವ ಮನೆಯ ಖಾನೇಷುಮಾರಿ ನಂ.69 ಆಗಿದ್ದು ಅದು ಹುಲುವಾಡಿ ಗ್ರಾಮಕ್ಕೆ

ಸೇರಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈಗ ನೋಡುತ್ತಿರುವ ಫೋಟೋದಲ್ಲಿ ಕಾಣುತ್ತಿರುವ ಮನೆ ಸದರಿ ಮನೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ಫೋಟೋದಲ್ಲಿ ಕಾಣುತ್ತಿರುವ ಮನೆಯಲ್ಲಿ ನಾನು ಹುಟ್ಟಿ ಬೆಳೆದಿರುವುದಿಲ್ಲ.

ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಾಗಿದ್ದು 2 ನೇ ಪ್ರತಿವಾದಿಯು ಭಾಗವನ್ನು ಪಡೆದು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದು ನನ್ನ ದಾವೆಯಲ್ಲಿ ಬರೆಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದ ಪತ್ರದ ಸಂಗತಿಗಳನ್ನು ನನಗೆ ನನ್ನ ವಕೀಲರು ಓದಿ ಹೇಳಿರುವುದಿಲ್ಲ ನಾನು ಸಹಾ ಕೇಳಿರುವುದಿಲ್ಲ. ನಿಪಿ.40 ರಲ್ಲಿ ದಿಃ15.09.1997 ರ ಪಾಲುಪಾರಿಕತ್ತಿನಂತೆ ಖಾತೆ ಬದಲಾವಣೆ ಮಾಡಲಾಗಿದೆ ಎಂದು ನಮೂದು ಮಾಡಲಾಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಿಃ15.09.1997 ರ ಪಾಲುಪಾರಿಕತ್ತಿನ ಮುಖಾಂತರ ನನ್ನ ದೊಡ್ಡಪ್ಪ ನಾರಾಯಣ, ನನ್ನ ತಂದೆ ಮತ್ತು ತಾಯಿಗೆ ಆಸ್ತಿಯನ್ನು ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.44/1 ರಲ್ಲಿ 9 1/2 ಗುಂಟೆ, ಸರ್ವೆ ನಂ.44/2 ರಲ್ಲಿ 12 1/2 ಗುಂಟೆ, ಸರ್ವೆ ನಂ.41 ರಲ್ಲಿ 4 1/2 ಗುಂಟೆ, ಸರ್ವೆ ನಂ.45 ರಲ್ಲಿ 25 1/2 ಗುಂಟೆ, ಸರ್ವೆ ನಂ.143/1 ರಲ್ಲಿ 1 ಎಕರೆ 7 1/2 ಗುಂಟೆ, ಸರ್ವೆ ನಂ.145/9 ರಲ್ಲಿ 4 3/4 ಗುಂಟೆ, ಸರ್ವೆ ನಂ.157 ರಲ್ಲಿ 27 1/2 ಗುಂಟೆ ಸ್ವತ್ತುಗಳನ್ನು 1997 ರಲ್ಲಿ ನಾನು ಮತ್ತು ನನ್ನ ತಮ್ಮ ಅಲ್ಪ ವಯಸ್ಕರು ಆಗಿದ್ದ ಕಾರಣ ನನ್ನ ತಾಯಿಯ ಪರವಾಗಿ ಭಾಗಾಂಶ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ದಿಃ16.09.2021 ರಂದು ನಾನು ನನ್ನತಾಯಿ ಮತ್ತು ನನ್ನ ತಮ್ಮ ಸೇರಿ ಸರ್ವೆ ನಂ.143/1 ರ 1 ಎಕರೆ 7 ಗುಂಟೆ ಜಮೀನನ್ನು ಮೋಹನರಾಮಚಂದ್ರ ಮತ್ತು ಅವರ ಹೆಂಡತಿ ವಿನುತಾಮೋಹನ್

ರವರಿಗೆ ನೊಂದಾಯಿತ ಕ್ರಯಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದ ಪತ್ರದಲ್ಲಿರುವ ಮತ್ತು ವಕಾಲತ್ತು ನಾಮೆಯಲ್ಲಿರುವ ಸಹಿಗಳು ನನ್ನದಾಗಿರುತ್ತದೆ. **ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ಸಹಾ ನನ್ನದಾಗಿರುತ್ತದೆ ಕೇವಲ ಸಹಿಯನ್ನು ಗುರುತಿಸಿರುವ ಉದ್ದೇಶದಿಂದ ದಿಃ16.09.2021 ರ ಕ್ರಯ ಪತ್ರವನ್ನು ನಿಡಿ.1 ಎಂದು ಗುರುತಿಸಲಾಯಿತು.** ದಾವಾ 7 ರಿಂದ 13 ನೇ ಐಟಂ ಸ್ವತ್ತುಗಳ ಖಾತೆ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ಸದರ ಸ್ವತ್ತುಗಳ ಖಾತೆಗಳು ನನ್ನ ದೊಡ್ಡಪ್ಪ ಮತ್ತು ನನ್ನ ತಂದೆ ಹೆಸರಿನಲ್ಲಿ ಜಂಟಿ ಖಾತೆ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ದೊಡ್ಡಪ್ಪ ಮೃತರಾಗಿರುತ್ತಾರೆ. ಅವರಿಗೆ ಪತ್ನಿ ಮತ್ತು ಇಬ್ಬರು ಮಕ್ಕಳಿರುತ್ತಾರೆ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನನ್ನಾಗಿ ಮಾಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.